ಶ್ರೀ ಕೆ. ಪುಟ್ಟಸ್ವಾಮಿ.–ಮಾನ್ಯ ಸದಸ್ಯರಿಗೆ ಬಹುಶಃ ಮೂಲ ಪ್ರಶ್ನೆಗೆ ಕೊಟ್ಟಂಥ ಉತ್ತರದಿಂದ ತೃಪ್ತಿಯಾಗಿದೆ ಎಂದು ಕಾಣುತ್ತದೆ. ಅವರು ಕೇಳುತ್ತಿರುವುದು ಹೊಸ ಅರ್ಜಿದಾರರಿಗೆ ತೊಂದರೆ ಯಾಗುತ್ತದೆ ಎಂದು. ಕೆಲವು ಸಾರಿ ತೊಂದರೆ ಆಗುತ್ತದೆ. ಅದಕ್ಕೆ ಬೇರೆ ಮಾರ್ಗವಿಲ್ಲ. ಅರ್ಜಿ ದಾರರಿಗೆ ತೊಂದರೆಯಾಗುತ್ತದೆ ಎಂದು ಎಲ್ಲ ನಡಿಲಸಿಬಿಟ್ಟರೆ ಭೂ ಅಭಿವೃದ್ಧಿ ಬ್ಯಾಂಕಿಗೆ ತೊಂದರೆ ಯಾಗಿ ಅವರು ತಮ್ಮ ಕಾರ್ಯವನ್ನು ಮುಂದುವರಿಸುವುದಕ್ಕಾಗುವುದಿಲ್ಲ.

ಶ್ರೀ ಬಿ. ಜೆ. ಲಿಂಗೇಗೌಡ.—ಸೇಕಡ 9 ರಂತೆ ಬಡ್ಡಿ ಕೊಟ್ಟರೆ ಅನುಕೂಲವಾಗಬಹುದು ಎಂಬ ಅಭಿಪ್ರಾಯವೇನಾದರೂ ಇದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಸರಕಾರಕ್ಕೆ ಆ ರೀತಿ ಹೆಚ್ಚಾಗಿ ಬಡ್ಡಿ ತೆಗೆದುಕೊಳ್ಳಬೇಕೆಂಬ ಅತುರವು ಇಲ್ಲ ಮತ್ತು ಹಾಗೆ ತೆಗೆದುಕೊಂಡರೆ ತೃಪ್ತಿಯೂ ಆಗುವುದಿಲ್ಲ. ಆದರೆ ಸರಕಾರ ಕೊಟ್ಟ ಹಣವನ್ನು ಸದುಪಯೋಗಮಾಡಿ ಬಾವಿ ತೆಗೆದು ಜನರಿಗೆ ಅನ್ನವನ್ನೊದಗಿಸಬೇಕು ಎಂಬುದೇ ಸರಕಾರದ ಗುರಿ.

ಶ್ರೀ ಸಿದ್ದಯ್ಯ ಕಾಶೀಮಠ್.—ಈಗ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕಿನಿಂದ ಡಿಸ್ಟ್ರಿಕ್ಟ್ ಬ್ಯಾಂಕಿಗೆ, ಅಲ್ಲಿಂದ ತಾಲ್ಲೂಕು ಬ್ಯಾಂಕಿಗೆ ಹಣ ಒದಗಿಸುವುದರಲ್ಲಿ ವಿಳಂಬವಾಗುತ್ತಿರುವುದನ್ನು ತಪ್ಪಿಸಲು ಸೂಕ್ತ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ರೀತಿ ತೊಂದರೆಯೇನೂ ಆಗದಂತೆ ಏರ್ಪಾಡುಮಾಡಿದ್ದೇವೆ. ಅಂಥ ತೊಂದರೆಯೇನಾದರೂ ಇದ್ದರೆ ಅದನ್ನು ಗಮನಕ್ಕೆ ತಂದರೆ ನಿವಾರಣೆಮಾಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಬಾವಿ ತೆಗೆಸುವವರು ಚೆಕ್ಕಿಕರ್ ಪೀಪರ್ ಅಲ್ಲದಿರುವುದರಿಂದ ಬಾವಿ ತೆಗೆದಾಗ ನೀರು ದೊರೆಯದಿದ್ದರೆ, ದಡ ಕುಸಿದರೆ ರೈತರಿಗೆ ಅಂಥ ಸಂದರ್ಭದಲ್ಲಿ ಸಹಾಯ ಮಾಡಲು ಏನು ಏರ್ಪಾಡುಮಾಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಸರಕಾರ ಸ್ಪಷ್ಟವಾಗಿ ಅಂಥ ಸಂದರ್ಭಗಳಲ್ಲೇನು ಮಾಡಬೇಕೆಂಬು ದನ್ನು ಸರಕಾರಿ ಆಜ್ಞೆಯಲ್ಲಿ ನಮೂದಿಸಿದೆ, ಅದನ್ನು ಮಾನ್ಯ ಸದಸ್ಯರು ಓದಿದ್ದರೆ ಈ ಪ್ರಶ್ನೆ ಕೇಳುತ್ತಿರಲಿಲ್ಲ.

———

Loan Applications sanctioned by the Central Land Development Bank, Bangalore.

*Q.—114. Sri K. P. REVANASIDDAPPA (Tiptur).—

Will the Minister for Co-operation and Housing be pleased to state :—

(*a*) the number of loan applications received by the Central Land Development Bank, Bangalore, from the Primary Land Development Bank, Tiptur, up to 26th July 1965 ;

(*b*) the number of applications for which loans have been sanctioned ?

A.—Sri K. PUTTASWAMY (Minister for Co-operation and Housing).—

(*a*) 508 from 1st July 1964 to 26th July 1965.

(*b*) 172 from 1st July 1964 to 26th July 1965.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇಷ್ಟು ಅರ್ಜಿಗಳು ಬಂದರೂ ಕೂಡ ಸಾಲಗಳ ಮಂಜೂರಾತಿ ನಿಧಾನವಾಡಲು ಕಾರಣವೇನು ? ಎರಡನೆಯ ಮತ್ತು ಮೂರನೆಯ ಕಂತಗಳು ಜಾಗ್ರತೆ ದೊರೆಯದೆ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ತಿಪಟೂರು ತಾಲ್ಲೂಕಿಗೆ ಎಷ್ಟು ಹಣ ಕೊಡ ಲಾಗಿದೆಯೆಂಬುದನ್ನು ನೋಡಿದರೆ ಸರಕಾರ ಎಷ್ಟು ಉದಾರವಾಗಿ ವರ್ತಿಸಿದೆಯೆಂಬುದು ಅರ್ಥ ವಾಗುತ್ತದೆ. ಆ ರೀತಿಯಲ್ಲಿ ಎಲ್ಲಾ ಬ್ಯಾಂಕುಗಳಿಗೂ ಹಣ ಒದಗಿಸಬೇಕಾದರೆ ಕನಿಷ್ಪಪಕ್ಷ ಒಂದು ವರ್ಷಕ್ಕೆ 10 ಕೋಟಿ ರೂಪಾಯಿಗಳಾದರೂ ಬೇಕು. ಆ ಕಾರಣದಿಂದ ಈಗ ತಿಪಟೂರಿನ ಅಭಿವೃದ್ಧಿ ಬ್ಯಾಂಕಿಗೆ ಹಣ ಒದಗಿಸಿರುವುದು ಸಮರ್ಪಕವಾಗಿದೆ, ಅರ್ಜಿಗಳು ಸಕಾಲದಲ್ಲಿ ಇತ್ಯರ್ಥವಾಗಿವೆ ಎಂಬ ಅಭಿಪ್ರಾಯವಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರು ತಾಲ್ಲೂಕಿನಲ್ಲಿ ಯಾವ ನದಿಯಾಗಲಿ, ತೊರೆಯಾಗಲಿ ಇಲ್ಲ ಮತ್ತು ಮಳೆ ಕಡಮೆ. ಬಾವಿಗಳಲ್ಲಿ 30—40 ಅಡಿಗಳು ತೆಗೆದಮೇಲೆ ನೀರು ದೊರೆಯುತ್ತದೆ. ಆದುದರಿಂದ ಅಲ್ಲಿನ ರೈತರಿಗೆ ಹೆಚ್ಚು ಹಣವನ್ನು ಜಾಗ್ರತೆಯಾಗಿ ಕೊಡಲು ಸರಕಾರ ಗಮನ ಕೊಡುವುದೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರದಲ್ಲಿ ಸರಕಾರಕ್ಕೆ ಮಾನ್ಯ ಸದಸ್ಯರಷ್ಟೇ ಆತುರವಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಸರಕಾರ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕಿಗೆ ಗ್ಯಾಂಟನ್ನು ಮಂಜೂರು ಮಾಡುವುದು ತಡವಾಗುತ್ತಿರುವುದರಿಂದ ಸಾಲದ ಅರ್ಜಿಗಳನ್ನು ಮಂಜೂರುಮಾಡಲು ನಿಧಾನವಾಗುತ್ತಿದೆ. ಆದುದರಿಂದ ಸರಕಾರ ಜಾಗ್ರತೆ ಗ್ಯಾಂಟನ್ನೊದಗಿಸಲು ಪ್ರಯತ್ನಮಾಡು ತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಎರಡು ವರ್ಷಗಳಿಂದ ಸರಕಾರ ಕೇಂದ್ರ ಅಭಿವೃದ್ಧಿ ಬ್ಯಾಂಕಿಗೆ ಎಷ್ಟು ಹಣ ಕೊಡುತ್ತಿದೆ ಎಂಬುದನ್ನು ನೋಡಿದರೆ ಸರಕಾರ ರೈತರ ಉದ್ಧಾರಕ್ಕಾಗಿ ಎಷ್ಟು ಶ್ರಮಿಸುತ್ತಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ. ಸರಕಾರ ಬಹಳ ಉದಾರವಾಗಿ ಹಣ ಸಹಾಯ ಮಾಡುತ್ತಿದೆ ಮತ್ತು ಕೇಂದ್ರ ಅಭಿವೃದ್ಧಿ ಬ್ಯಾಂಕು ತೆಗೆದ ಡಿಬೆಂಚರು ಸಾಲಕ್ಕೂ ಸಾಕಾದಷ್ಟು ಹಣ ಬರುತ್ತಿದೆ. ಹಣ ಕೊಡುವುದನ್ನೇನೂ ಕಡಿಮೆಮಾಡಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಬಡವರು ಅರ್ಜಿ ಕೊಟ್ಟರೆ ಬೇಗ ಸಾಲ ಕೊಡುವುದಿಲ್ಲ. 5 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಸಾಲ ಕೇಳುವವರಿಗೆ ಬೇಗ ಮಂಜೂರುಮಾಡುತ್ತಾರೆ. ಇದನ್ನು ತಪ್ಪಿಸಿ ಬಡವರಿಗೆ ಹೆಚ್ಚು ಸಾಲ ಕೊಡುವಂತೆ ಏರ್ಪಾಡುಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ನನಗೆ ತಿಳಿದಹಾಗೆ ಸರಕಾರ, ಕೇಂದ್ರ ಅಭಿವೃದ್ಧಿ ಬ್ಯಾಂಕು, ಪ್ರೈಮರಿ ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕು ಮುಂತಾದುವು ಸಾಮಾನ್ಯವಾಗಿ ಬಡ ರೈತರ ಅರ್ಜಿಗಳಿಗೆ ಆದ್ಯತೆ ಕೊಡುತ್ತಿವೆ, ಆ ದಿಶೆಯಲ್ಲಿ ಪ್ರಯತ್ನಮಾಡುತ್ತಿವೆ. ಆದರೆ ಗ್ಯಾಮಾಧಿ ಕಾರಿಗಳು ರಿಕಾರ್ಡನ್ನು ಕೊಡದೆ ತೊಂದರೆಯಾಗುತ್ತಿದೆ.

ಶ್ರೀ ಜಿ. ರಾಮೇಗೌಡ.—ಕೇಂದ್ರದ ಬ್ಯಾಂಕು ತಾಲ್ಲೂಕಿಗೆ ಹಣ ಕೊಡುವಾಗ ಬಂದಿರುವ ಅರ್ಜಿಗಳ ಸಂಖ್ಯೆಯ ಆಧಾರದಮೇಲೆ ಕೊಡುವುದೇ ಅಥವಾ ಬೇರೆ ವಿಷಯಗಳನ್ನು ಪರಿಶೀಲಿಸಿ ಕೊಡುವುದೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಮೂಲ ಪ್ರಶ್ನೆ. ಭೂಮಿ ಅಭಿವೃದ್ಧಿ ಮಾಡುವುದಕ್ಕೆ ಮತ್ತು ಹಿಂದಿನ ಸಾಲ ತೀರಿಸುವುದಕ್ಕೆ ಈ ಧಿವಸ ಕೇಂದ್ರ ಅಭಿವೃದ್ಧಿ ಬ್ಯಾಂಕು ಜಮಾನು ಅಭಿವೃದ್ಧಿ ಬ್ಯಾಂಕಿಗೆ ಪ್ರತಿಯೊಂದು ತಾಲ್ಲೂಕಿಗೆ ಒಂದೂವರೆಯಿಂದ ಎರಡು ಲಕ್ಷ ರೂಪಾಯಿಗಳವರೆಗೆ ಕೊಡು ವುದು. ಮಾನ್ಯ ಸದಸ್ಯರು ಬಾವಿ ವಿಚಾರ ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದರೆ ಎಲ್ಲ ನೀರಾವರಿ ಸೌಲಭ್ಯವಿಲ್ಲ, ಯಾವ ಪ್ರದೇಶ ಪದೇಪದೇ ಕ್ಷಾಮಕ್ಕೆ ತುತ್ತಾಗುವುದು ಅಲ್ಲಿಗೆ ಆದ್ಯತೆ ಕೊಡುವುದು ಸರಕಾರದ ಉದ್ದೇಶ. ಇದೇ ನೀತಿಯನ್ನು ಕೇಂದ್ರ ಅಭಿವೃದ್ಧಿ ಬ್ಯಾಂಕೂ ಕೂಡ ಅನುಸರಿಸುವುದು.

ಶ್ರೀ ಎಸ್. ಶಿವಪ್ಪ.—ಬಡವರನ್ನು ಅಧಿಕಾರಿಗಳು ಶೋಷಣೆಮಾಡಬೇಕೆಂದು ಇರುವ ಕಡೆ ಆ ರೀತಿ ಮಾಡುತ್ತಿರುವ ಕಡೆ ಅಂಥವರಮೇಲೆ ಉಗ್ರಕ್ರಮ ತೆಗೆದುಕೊಳ್ಳುವ ಕಾರ್ಯಕ್ರಮವಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ರೈತನ ಪರಿಸ್ಥಿತಿ ಉತ್ತಮಪಡಿಸಲು ಅನೇಕ ಕಾನೂನುಗಳನ್ನು ಮಾಡುತ್ತಿರುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಗೊತ್ತಿದೆ. ಈಗ ಹಿಂದಿದ್ದ ಗ್ಯಾಮಾಧಿ ಕಾರಿಗಳನ್ನು ತೆಗೆದು ಅದಕ್ಕೆ ಬದಲಾಗಿ ಬೇರೆ ಸರಕಾರಿ ನೌಕರರನ್ನು ನೇಮಕಮಾಡಿ ಅವರನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಮಾಡುವುದರಿಂದ ರೈತರಿಗೆ ಶೋಷಣೆಯಾಗುವುದಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸಮಿತಿಯ ಸದಸ್ಯರು ಬೇಕಾದವರು ಮತ್ತು ಮುಖಂಡರ ಅರ್ಜಿಗಳನ್ನು ಮಾತ್ರ ದಾಖಲು ಮಾಡಿಕೊಂಡು ಉಳಿದವುಗಳನ್ನು ಹಾಗೆಯೇ ಬಿಡುವುದರಿಂದ ಬಡವ ಬಲ್ಲದರೆಂಬ ಭೇದ ಮಾಡುವುದರಿಂದ ಬಡವರಿಗೆ ಸಾಲ ದೊರೆಯಲು ಹೇಗೆ ಸಾಧ್ಯ ?

ಶ್ರೀ ಕೆ. ಪುಟ್ಟಸ್ವಾಮಿ.—ತಿಪಟೂರಿನ ವಿಚಾರ ತೆಗೆದುಕೊಂಡರೆ 508 ಅರ್ಜಿಗಳು ಬಂದಿದ್ದವು, ಅವುಗಳಲ್ಲಿ 172ಕ್ಕೆ ಸಾಲ ಮಂಜೂರು ಮಾಡಿದೆ, 18 ಮಾತ್ರ ತಿರಸ್ಕರಿಸಲ್ಪಟ್ಟಿವೆ, 11 ಹಿಂದಕ್ಕೆ ಕಳುಹಿಸಲಾಗಿದೆ. ಆಮೇಲೆ 26ನೇ ಜುಲೈ 1965ರಿಂದ ಈವರೆಗೆ 104 ಹೊಸ ಅರ್ಜಿಗಳು ಬಂದು ಅದರ ಪೈಕಿ 98 ಮಂಜೂರಾಗಿವೆ. ಕಾನೂನು ತಿದ್ದುಪಡಿಯಾದಮೇಲೆ ಅದರ ಪ್ರಕಾರ ಅರ್ಜಿ ಕೂಡ ತಿದ್ದುಪಡಿ ಮಾಡಬೇಕೆಂದು 321 ಅರ್ಜಿಗಳನ್ನು ವಾಪಸು ಮಾಡಿದೆ. ಈ ಅಂಕಿಅಂಶಗಳನ್ನು ನೋಡಿದರೆ ತಾರತಮ್ಯ ಮಾಡಿದ್ದು ನನಗೇನೂ ಕಾಣುತ್ತಿಲ್ಲ. ಸಾಮಾನ್ಯವಾಗಿ ಬಡವರ ಅರ್ಜಿಗೆ ಆದ್ಯತೆ ಕೊಡುವುದಿಲ್ಲ ಶ್ರೀಮಂತರ ಅರ್ಜಿಗೇ ಆದ್ಯತೆ ಕೊಡುತ್ತಾರೆ ಅನ್ನುವಂತಹ ಒಂದು ಆಪಾದನೆಯನ್ನು ಮಾಡಿದ್ದಾರೆ. ನನ್ನ ಅನುಭವದಲ್ಲಿ ನಮ್ಮ ಭಾಗದಲ್ಲಿ ನೂರಕ್ಕೆ ತೊಂಭತ್ತೊಂಬತ್ತು ಭಾಗ ಬಡವರೇ ಇದ್ದಾರೆ, ಆದ್ದರಿಂದ ಈ ಅರ್ಜಿಗಳೆಲ್ಲಾ ಬಡವರದೇ ಮಂಜೂರಾಗಿದೆ ಎಂದು ನನ್ನ ಅಭಿಪ್ರಾಯ.

Financial Assistance to the State Marketing Society, Bangalore

*Q.—70. **Sri H. D. DEVE GOWDA** (Holenarasipur).—

Will the Minister for Co-operation and Housing be pleased to state :—

(*a*) the amount of financial assistance given to the State Marketing Co-operative Society, Bangalore, during the last 3 years under the following head :—

1 Interest-free loan
2 Loan with interest
3 Subsidy amount
4 Managerial cost
5 Any other assistance ;

(*b*) for what purposes the amount was sanctioned ?

A.—**Sri K. PUTTASWAMY** (Minister for Co-operation and Housing).—

(*a*) and (*b*) *Vide* statement appended.